O.S. 57/2014

ಪಿ ಡಬ್ಲ್ಯೂ-1

ಸಾಕ್ಷಿಯನ್ನು ದಿಃ26.03.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಕೆ ಆರ್ ಡಿ ವಕೀಲರಿಂದಃ**

ನನ್ನ ಇಬ್ಬರು ಮಕ್ಕಳು ವಯಸ್ಕರಾದರೂ ಸಹ ನ್ಯಾಯಾಲಯಕ್ಕೆ ಬರಲು ಆಗುತ್ತಿಲ್ಲ ಹಾಗಾಗಿ ನಾನೇ ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಮೊದಲಿನಿಂದಲೂ ಈ ದಾವೆಯಲ್ಲಿ ನಾನೇ ಹಾಜರಾಗುತ್ತಿದುದ್ದರಿಂದ ಸಾಕ್ಷಿ ನಾನೇ ಹೇಳುತ್ತಿದ್ದೇನೆ. ನಾನು ನನ್ನ ಗಂಡನ ವಿರುದ್ದ ಜೀವನಾಂಶ ಮತ್ತು ಇತರೆ ಪರಿಹಾರ ಕೋರಿ ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ಒಂದು ಪ್ರಕರಣ ಸಲ್ಲಿಸಿದ್ದು ನಿಜ. ಸದರಿ ಜೀವನಾಂಶ ಕೋರಿ ಪ್ರಕರಣವನ್ನು 2013 ರಲ್ಲಿ ಸಲ್ಲಿಸಿದ್ದೆನು. 2013 ರಿಂದ ನಾನು ನನ್ನ ಮಕ್ಕಳ ಜೊತೆ ಬೇರೆ ವಾಸ ಮಾಡುತ್ತಿದ್ದೇನೆ . ಅದೇ ರೀತಿ ನನ್ನ ಗಂಡ ಪ್ರತ್ಯೇಕ ವಾಸ ಮಾಡುತ್ತಿರುವುದು ನಿಜ. ನಾನು ನನ್ನ ಗಂಡನ ವಿರುದ್ದ ಸೇಡು ತೀರಿಸಿಕೊಳ್ಳಲು ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸುಳ್ಳು. ನನ್ನ ಮಗಳು ಸೌಜನ್ಯ ದಾವಾ ಸ್ವತ್ತಿನಲ್ಲಿ ತನ್ನ ಪಾಲನ್ನು ಕೋರಿ ಯಾವತ್ತೂ ಪ್ರತಿವಾದಿಯರಿಗೆ ಕೇಳಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ವಾದಿಯರಾಗಲೀ ಅಥವಾ ತಾನಾಗಲೀ ಪ್ರತಿವಾದಿ ತಿಪ್ಪೇಸ್ವಾಮಿಗೆ ಪಾಲು ಕೇಳಿಲ್ಲ. ಏಕೆಂದರೆ ಆತನು ನಮ್ಮ ಕೈಗೆ ಸಿಕ್ಕಿಲ್ಲ. ಸಾಕ್ಷಿಯು ಸ್ವತಃ ತನ್ನ ಗಂಡ ಎಲ್ಲಿದ್ದಾನೆಂದು ಗೊತ್ತಿಲ್ಲ. ದಾವೆ ಸಲ್ಲಿಸಿದಾಗಿನಿಂದ ತಿಪ್ಪೇಸ್ವಾಮಿ ನಿಮಗೆ ಸಿಗಲಿಲ್ಲವೇ ಎಂದರೆ ಸಾಕ್ಷಿ ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ಮತ್ತು ಈ ನ್ಯಾಯಾಲಯದಲ್ಲಿ ಯಾವತ್ತೂ ಬಂದಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ ತಿಪ್ಪೇಸ್ವಾಮಿ ಸಿಕ್ಕಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ನ್ಯಾಯಾಲಯದ ಪೂರ್ವಾರ್ಹ್ನದ ಸಮಯ ಮುಗಿದಿದ್ದರಿಂದ ಸಾಕ್ಷಿಯ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು).**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.